ಅಧ್ಯಯನ ಯೋಗ್ಯವಾಗಿವೆ.

ಕನ್ನಡ ಸಾಹಿತ್ಯದಲ್ಲಿ ತಮ್ಮ ಮಡದಿಗೆ ಅರ್ಪಣೆ ಮಾಡದಿರುವ ಲೇಖಕರು ವಿರಳ ಎನ್ನುವಷ್ಟರಮಟ್ಟಿಗಿದೆ. ಎಷ್ಟೋಸಂದರ್ಭದಲ್ಲಿ ಅಂದುಕೊಂಡವರಿಗೆ ಅರ್ಪಣೆ ಮಾಡಲು ಸಾಧ್ಯವಾಗದಿರಲೂಬಹುದು ಪೂರ್ವಾಶ್ರಮದಲ್ಲಿ ಗೆಣತಿಯ ಸ್ನೇಹವಿದ್ದು ಆಕೆಗೆ ಈಗ ಅರ್ಪಿಸಲು ಹೊರಟರೆ ಸತಿಯಿಂದ ಸಮಾರಾಧನೆ ಆಗಬಹುದೆಂದು ತೊಳ್ಳೆ ನಡುಗಿ ಸುಮ್ಮನಾಗಬಹುದು. ಗೆಳೆಯನೊಬ್ಬ ಪ್ರೀತಿಸುತ್ತಿದ್ದ ಹುಡುಗಿಗೆ ಕವಿತೆಗಳನ್ನು ಬರೆಯುತ್ತಿದ್ದ. 'ಇವುಗಳನ್ನೆಲ್ಲ ಸೇರಿಸಿ ಕವನ ಸಂಕಲನ ಹೊರತಂದು ಅದನ್ನು ನಿನಗೆ ಅರ್ಪಿಸಿ ಕನ್ನಡ ಸಾಹಿತ್ಯ ಲೋಕದಲ್ಲಿ ನಿನ್ನ ಹೆಸರನ್ನು ಚಿರಸ್ಥಾಯಿಗೊಳಿಸುತ್ತೇನೆ' ಎಂದು ಅವಳ ಮುಂದೆ ಹಲುಬುತ್ತಿದ್ದ. ಎಷ್ಟು ಕವಿತೆಗಳಲ್ಲಿ ಆ ಕನ್ಯಾಮಣಿಯನ್ನು ಹಾಡಿಹೊಗಳಿದರೂ ಇವನ ಮುಸುಡಿ ಕಪ್ಪೆಂದು ಜರಿದಳೇ ಹೊರತು ಕವನ ಸಂಕಲನವನ್ನು ಅರ್ಪಣೆ ಮಾಡಲು ಎಡೆಗೊಡಲಿಲ್ಲ. ಕಾಲೇಜಿನ ತರಗತಿ ಕೊಠಡಿಯಲ್ಲಿಯೇ ವಿಷಪ್ರಾಶನ ಮಾಡಿದ ಭಗ್ನಮಿತ್ರನನ್ನು ಹೇಗೋ ಬದುಕಿಸಿದೆವು. ಸದ್ಯ ಇವನು ಪ್ರಾಣಾರ್ಪಣೆಯಿಂದ ಪಾರಾದ. ಇವನ ಪಾಲಿನ ಆ 'ವಿಷಕನ್ಯೆ' ಮಂಗಳೂರಿನ ಉದ್ಯಮಿಯೊಬ್ಬನನ್ನು ಕೈಹಿಡಿದು ಅವನ ಬಾಳಿಗೆ ಜಲಸುಂದರಿಯಾದಳು. ರಾಷ್ಟ್ರಕೂಟರು, ಹೊಯ್ಸಳರ ಕಾಲದಲ್ಲಿ ರಾಜರಿಗಾಗಿ ಜೀವಾರ್ಪಣೆ ಮಾಡುವ ವೇಳೆವಾಳಿಗಳು, ಗರುಡರು, ಸಿಡಿತಲೆಗಳು ಇದ್ದರು. ಸದ್ಯಕ್ಕೀಗ ಹಣ, ಅಂತಸ್ತು, ಜಾತಿ, ಬಣ್ಣದ ಕಾರಣಕ್ಕೆ ತಿರಸ್ಕೃತರಾಗುವ 'ಪ್ರೇಮವಾಳಿ'ಗಳು, ಬೀಜ, ಗೊಬ್ಬರ, ಆಳು, ಕಾಳು, ನೀರು ಎಂದು ಪರದಾಡಿ ಬೆಳೆದದ್ದಕ್ಕೆ ನ್ಯಾಯವಾದ ಬೆಲೆ ಸಿಗದೆ ಈ ಬಾಳು ಸಾಕಪ್ಪ ಸಾಕೆಂದು ನಿರ್ಗಮಿಸುವ 'ಸಾಲವಾಳಿ'ಗಳು ಇದ್ದಾರೆ.

ಆ್ಯಕ್ಟಿವಿಸ್ಟ್‌ಗಳು ಹೊರತಂದ ಪುಸ್ತಕಗಳು ನಿಜವಾಗಿಯೂ ನಮ್ಮ ಒಳಗಣ್ಣಿಗೆ ಕೆಲಸ ಕೊಡುತ್ತವೆ. ಈ ಹಿನ್ನೆಲೆಯಲ್ಲಿ ನಮ್ಮ ದೇಶ ಕಂಡ ದೊಡ್ಡ ಪರಿಸರ ವಿಜ್ಞಾನಿ ಮಾಧವ ಗಾಡ್ಗೀಳ್ ಅವರ 'ಏರುಘಟ್ಟದ ನಡಿಗೆ'ಯ ಅರ್ಪಣೆಯನ್ನು ಗಮನಿಸಬೇಕು. ಏಕಕಾಲಕ್ಕೆ ಗಾಡ್ಗೀಳರ ಆತ್ಮಕಥೆಯೂ, ಭಾರತದ ಪರಿಸರದ ಬಗ್ಗೆ ಅರಿವನ್ನು ವಿಸ್ತರಿಸುವ ಮಹತ್ವದ ದಾಖಲೆಯೂ, ಬಹುಶಿಸ್ತೀಯ ಪಠ್ಯವೂ ಆಗಿರುವ ಈ ಕೃತಿಯನ್ನು ಬಿಸ್ಮಾರ್ಕ್ ಡಿಯಾಸ್ ಅವರಿಗೆ ಅರ್ಪಿಸಲಾಗಿದೆ. ಈ ಹೆಸರು ನಮಗೆ ಗೊತ್ತಿಲ್ಲದ ಯಾರೋ ದೊಡ್ಡ ವ್ಯಕ್ತಿಯದ್ದಿರಬಹುದು ಎಂದು ಕೊಂಡರೆ ಊಹೆ ತಪ್ಪಾಗುತ್ತದೆ. ಗೋವಾದಲ್ಲಿ ದ್ವೀಪದಂತಿರುವ ಒಂದು ಊರಿನಲ್ಲಿ ವಾಸ ಮಾಡುತ್ತಿದ್ದ ಬಿಸ್ಮಾರ್ಕ್ ಅಲ್ಲಿನ ಒಂದು ಗುಡ್ಡವನ್ನು ರಕ್ಷಣೆ ಮಾಡಲು ಹೋಗಿ ರಿಯಲ್ ಎಸ್ಟೇಟ್‌ನವರ ಕೆಂಗಣ್ಣಿಗೆ ಗುರಿಯಾಗಿ ಒಂದು ದಿನ ನದಿಯಲ್ಲಿ ಕಳೇಬರವಾದವರು. ಒಂದು ಗುಡ್ಡವನ್ನು ಸಂರಕ್ಷಿಸಲು ಹೋರಾಡಿದ ಬಿಸ್ಮಾರ್ಕ್‌ನ ಕಥೆಯಿದು. ಇನ್ನು ಗ್ರೇಟಾ ಥನ್ಬರ್ಗ್ ಮೇಲೆ ಟ್ರಂಪಣ್ಣನ ಕಣ್ಣು ಎಷ್ಟು ಕೆಂಪಾಗಿದೆಯೋ!

ಇಲ್ಲಿಯೇ ಕಾರಂತರ 'ಚೋಮನ ದುಡಿ'ಯ ಅರ್ಪಣೆಯನ್ನು ನೆನಪಿಸಿಕೊಳ್ಳುವುದು ಉಚಿತ. ಬಹುಮುಖಿ ವ್ಯಕ್ತಿತ್ವದ ಕಾರಂತರು ದುಡಿಯ ಮುನ್ನುಡಿಯಲ್ಲಿ ಹೀಗೆ ಹೇಳಿಕೊಂಡಿದ್ದಾರೆ; "ಈ ಗ್ರಂಥದ ಅರ್ಪಣೆಯ ವಿಚಾರ- ಇದನ್ನು ನನ್ನೊಬ್ಬ ಮಿತ್ರರಾದ ಕುಂದಾಪುರದ ದೇವಣ್ಣ ಸುಬ್ರಾಯ ಪೈಗಳಿಗೆ ಅರ್ಪಿಸಿದ್ದೇನೆ. ಅವರೇನು ದೊಡ್ಡ ಮನುಷ್ಯರ ವರ್ಗಕ್ಕೆ ಸೇರಿದವರಲ್ಲ. ಬಡ ಗುಮಾಸ್ತರೊಬ್ಬರು...ನಾನು ಚಿಕ್ಕವನಿರುವಾಗ (ಈಗ ದೊಡ್ಡವನಾಗಿಲ್ಲ.) ಅವರ ಬೆಂಬಲವಿಲ್ಲದಿದ್ದರೆ ನನಗೆ ಸಾಹಿತ್ಯದ ಕ್ಷೇತ್ರದಲ್ಲಿ ಹಾರುವುದು ಅಸಾಧ್ಯದ ಮಾತಾಗಿತ್ತು". ಕಾರಂತರು ಗೆಳೆಯರಿಂದ ಪಡೆದ ನೆರವನ್ನು ಎದೆತುಂಬಿ ಸ್ಮರಿಸಿಕೊಳ್ಳುತ್ತಾರೆ. ಈ ಮೂಲಕ ಕಲಾಕೃತಿಗಳನ್ನು ಕೀರ್ತಿವಂತರಿಗೆ ಅರ್ಪಿಸುವ ವಾಡಿಕೆಯನ್ನು ಕಾರಂತರು ಮುರಿದರು.

ಜಿ.ಎಚ್. ನಾಯಕರ 'ದಲಿತ ಚೈತನ್ಯ' ಕೃತಿಯ ಅರ್ಪಣೆ ಹೀಗಿದೆ; "ಮಹಾಮಹಿಮ ಮೇರು ಧೀಮಂತ ಭಾರತ ರತ್ನ ಡಾ. ಬಿ.ಆರ್. ಅಂಬೇಡ್ಕರ್ ಅವರಿಗೆ ಪರಮ ಗೌರವದಿಂದ." ಇಲ್ಲಿ ನಾಯಕರು ಅಂಬೇಡ್ಕರರನ್ನು ನಾಲ್ಕು

